# ಆಹಾ ಸುದ್ದಿ!

★ ಸಸಿತೋಟ




ಇದೇನು ಸೂಪರ್ ಮಾರ್ಕೆಟ್‌ನಲ್ಲಿ ಶಿಲಾಯುಗದ ಜನ ಷಾಪಿಂಗ್ ಮಾಡುತ್ತಿದ್ದಾರೆ! ಜರ್ಮನಿಯಲ್ಲಿ 26 ಮಂದಿ ವಿಜ್ಞಾನಿಗಳು, ವಿದ್ಯಾರ್ಥಿಗಳು ಸೇರಿ ಶಿಲಾಯುಗದ ಜನರಂತೆ ವರ್ತಿಸುತ್ತಿದ್ದಾರಂತೆ. ಆಹಾರವನ್ನೂ ಅವರಂತೆ ಹಸಿ ಮಾಂಸ ಹುಡುಕಿಕೊಂಡು ಹೊರಡುವ ಬದಲು ಅದೇಕೆ ಸೂಪರ್ ಮಾರ್ಕೆಟ್ಟಿಗೆ ಕಾಲಿಟ್ಟರೋ!

ಅಮೆರಿಕಾದ ಹೂಸ್ಟನ್ ಕಂಪೆನಿಯೊಂದು ಅಂತ್ಯ ಸಂಸ್ಕಾರದ ನಂತರ ಅಸ್ಥಿ ಹಾಗೂ ಬೂದಿಯನ್ನು ಬಾಹ್ಯಾಕಾಶಕ್ಕೆ ಒಯ್ದು ಮರಳಿ ತರುವ ಕೆಲಸ ಮಾಡುತ್ತಿದೆ. ಸೆಲೆಸ್ಟಿಸ್ ಎಂಬ ಈ ಕಂಪೆನಿ ಈಗ ಸಾಕು ಪ್ರಾಣಿಗಳ ಅಸ್ಥಿಗೂ ಬಾಹ್ಯಾಕಾಶ ತೋರಿಸಿ ಬರುವ ಕೆಲಸ ಮಾಡುವುದಾಗಿ ಪ್ರಕಟಿಸಿದೆಯಂತೆ. ಮಾನವನಿಗೂ- ಪ್ರಾಣಿಗೂ ಒಂದೇ ದರ- 995 ಡಾಲರ್. ಮಾನವನಾದರೇನು, ಪ್ರಾಣಿಯಾದರೇನು- ಸತ್ತ ಮೇಲೆ ಎಲ್ಲರೂ ಒಂದೇ ತಾನೆ. ಅಸ್ಥಿಯಾಗುವುದು, ಇಲ್ಲ ಬೂದಿಯಾಗುವುದು.

ಚೀನಾದಲ್ಲಿ ಕಾರು ಸರ್ವಿಸ್ ಸೆಂಟರ್‌ನ ಮಾಲೀಕನೊಬ್ಬ ಗ್ರಾಹಕರನ್ನು ಆಕರ್ಷಿಸಲು ಕಂಡುಕೊಂಡ ಉಪಾಯವಿದು. ಇಬ್ಬರು ರೂಪದರ್ಶಿಗಳು ಬಿಕಿನಿ ತೊಟ್ಟು ಕಾರನ್ನು ತೊಳೆಯುವುದು, ಗ್ರಾಹಕರು ಅವರ ಜೊತೆ ಫೋಟೊ ತೆಗೆಸಿಕೊಳ್ಳುವುದು. ಈ ಆಕರ್ಷಣೆ ಕೆಲವೇ ದಿನಗಳು ಮಾತ್ರ. ಕಾರು ಸರ್ವಿಸ್ ಸೆಂಟರ್ ತುಂಬಿ ತುಳುಕುವುದೂ ಕೆಲವೇ ದಿನಗಳು ಮಾತ್ರ ಇರಬಹುದು.



ದುರದೃಷ್ಟದ ಸಂಕೇತ ಎಂದು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ನಂಬಲಾಗುವ ಕಪ್ಪು ಬೆಕ್ಕುಗಳನ್ನು ಬ್ರಿಟನ್ನಿನಲ್ಲಿ ಅವುಗಳ ಮಾಲೀಕರು ಮನೆಯಿಂದ ಆಚೆ ಅಟ್ಟುತ್ತಿದ್ದಾರಂತೆ. ಆದರೆ ಈ ಬಾರಿಯ ರಗಳೆ ಈ ನಂಬಿಕೆಯಿಂದಲ್ಲ, ಬದಲಾಗಿ ಕ್ಯಾಮೆರಾ ಮೊಬೈಲಿನಲ್ಲಿ ತೆಗೆದುಕೊಳ್ಳುವ ಸೆಲ್ಫಿ ಫೋಟೋದಲ್ಲಿ ಕರಿ ಬೆಕ್ಕು ಚೆನ್ನಾಗಿ ಕಾಣುವುದಿಲ್ಲ ಎಂಬುದು ಕಾರಣವಂತೆ. ಉಡುಪು ವಿನ್ಯಾಸಕರು ಒಂದೊಂದು ವರ್ಷ ಒಂದೊಂದು ಬಣ್ಣವನ್ನು ಪ್ರಚಾರ ಮಾಡುತ್ತಾರಲ್ಲ, ಈ ಬೆಕ್ಕುಗಳ ಬಣ್ಣವೂ ಹಾಗೇ ಇರಬಹುದು.



ಬೀಜಿಂಗ್‌ನಲ್ಲಿ ಸೀಫುಡ್ ಹೋಟೆಲ್ ಮಾಲೀಕನೊಬ್ಬ ಪ್ರಚಾರಕ್ಕಾಗಿ ಏಡಿಗಳನ್ನು ರಸ್ತೆಯಲ್ಲಿ ನಡೆದಾಡಿಸಿದ. ಹಿಂದೊಮ್ಮೆ ಎಲೆಕೋಸಿನ ತಿನಿಸು ಪ್ರಚಾರಕ್ಕೆ ರೂಪದರ್ಶಿಗಳು ಎಲೆಕೋಸಿನ ಉಡುಗೆ ತೊಟ್ಟು ಓಡಾಡಿದಷ್ಟು ಗ್ಲಾಮರ್ ಈ ಏಡಿ ನಡಿಗೆಯಲ್ಲಿ ಇರಲಿಲ್ಲ ಎಂದು ಜನ ಆಡಿಕೊಂಡರಂತೆ. ಆದರೂ ಈ ನಡಿಗೆಯು ಏಡಿ ದಯಾ ಸಂಘದವರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಏಡಿಗಳನ್ನು ನಡೆಸಿದರೆ ಸಂಘದವರ ಕಣ್ಣು ಕೆಂಪು, ಖಾದ್ಯ ಮಾಡಿ ತಿಂದರೆ ಹೊಟ್ಟೆ ತಂಪು.




ಲಂಡನ್ನಿನಲ್ಲಿ ಸುಮೋಗಳಿಂದ ಚ್ಯಾರಿಟಿ ಓಟ ನಡೆಯಿತು. ನಿಜವಾದ ಸುಮೋಗಳನ್ನು ಜಪಾನಿನಿಂದ ಹಣ ಕೊಟ್ಟು ಕರೆಸಬೇಕು. ಹೀಗಾಗಿ ಸ್ಥಳೀಯರೇ ಗಾಳಿ ಹಾಕಿ ಉಬ್ಬಿಸಿದ ಸುಮೋ ಉಡುಗೆ ತೊಟ್ಟು ಓಡಿದರಂತೆ. ಚ್ಯಾರಿಟಿಗಾಗಿ ಎಂದು ಜನ ಬಾಯಿ ಮುಚ್ಚಿಕೊಂಡು ನೋಡಿರಬಹುದು, ಇಲ್ಲದಿದ್ದರೆ ಆಯೋಜಕರಿಗೆ ಸುಮೋ ಹೊಡೆತದ ರುಚಿ ಸಿಗುತ್ತಿತ್ತು.